**ಶ್ರೀ. ಮಧು ಜಿ ಮಾದೇಗೌಡ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರ ನಿಮಯ - 72 ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡುವ ಬಗ್ಗೆ.**

**ಪ್ರಶ್ನೆ**

ಸರ್ಕಾರಿ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣ ನೀಡುವ ಸದುದ್ದೇಶದಿಂದ ರಾಜ್ಯದಲ್ಲಿ 'ಮಾಹಿತಿ ಸಿಂಧು' ಕಾರ್ಯಕ್ರಮವನ್ನು ಜಾರಿಗೆ ತರಲಾಗಿತ್ತು. ಆದರೆ, ವರ್ಷಗಳು ಕಳೆದಂತೆ ಈ ಯೋಜನೆಯೂ ಸ್ಥಗಿತಗೊಂಡಿತು. ಆ ಮೂಲಕ ಕಂಪ್ಯೂಟರ್ ಶಿಕ್ಷಣ ಕಲಿಯುವ ಅಸಂಖ್ಯ ಗ್ರಾಮೀಣ ಪ್ರದೇಶ ಮಕ್ಕಳು ಕನಸು ಕಮರಿತು. ಇನ್ನೊಂದೆಡೆ, ಸರ್ಕಾರ ವಸತಿ ಶಾಲೆಗಳಿಗೆ ಸುಮಾರು 811 ಕಂಪ್ಯೂಟರ್ ಶಿಕ್ಷಕ ಕಾಯಂ ಹುದ್ದೆಗಳನ್ನು ಮಂಜೂರು ಮಾಡಿ ಕಂಪ್ಯೂಟರ್ ಶಿಕ್ಷಣವನ್ನು ನೀಡಲಾರಂಭಿಸಿತು.

ಅದು ಸರ್ಕಾರಿ ಶಾಲೆಯೇ ಇರಲಿ, ವಸತಿ ಶಾಲೆಯೇ ಇರಲಿ ಶಾಲಾ ಶಿಕ್ಷಣದಲ್ಲಿ ಸಮಾನತೆ ಇರಬೇಕು. ಸಮಾನ ಶಾಲಾ ಶಿಕ್ಷಣದ ಪರಿಕಲ್ಪನೆಗೆ ಮೂಲಾಧಾರವೆಂದರೆ ಶೈಕ್ಷಣಿಕ ಸಮಾನತೆ. ಆದರೆ ನಮ್ಮಲ್ಲಿ 'ಸಮಾನ ಶಾಲಾ ಶಿಕ್ಷಣ' ಎಂಬುವುದು ಶೈಕ್ಷಣಿಕ ಅಸಮಾನತೆಗೆ ಎಡೆಮಾಡಿದೆ. ಆಧುನಿಕ ಶಿಕ್ಷಣದ ಇಂದಿನ ಅಗತ್ಯತೆಗೆ ಪೂರಕವಾಗಿ ಸರ್ಕಾರಿ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ಮತ್ತೆ ಆರಂಭಿಸಬೇಕಿದೆ. ಆ ಮೂಲಕ ಸರ್ಕಾರಿ ಶಾಲೆಗಳಲ್ಲಿನ ಗ್ರಾಮೀಣ ಮಕ್ಕಳೂ ಕಂಪ್ಯೂಟರ್ ಶಿಕ್ಷಣ ಕಲಿಯುವಂತೆ ಅನುಕೂಲ ಮಾಡಿಕೊಡಬೇಕಿದೆ. ಹಾಗಾಗಿ, ಈ ಕುರಿತು ನಿಯಮ 72ರಡಿ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ**

ಶಾಲಾ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರೌಡ ಶಾಲೆಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳ ಗಣಕ ಸಾಕ್ಷರತೆಗೆ ವಿಶೇಷ ಆಸಕ್ತಿ ವಹಿಸಿದೆ. ಈ ನಿಟ್ಟಿನಲ್ಲಿ ಮಾಹಿತಿ ಸಿಂಧು, ಐಸಿಟಿ ಫೇಸ್-1 ಮತ್ತು ಐಸಿಟಿ ಫೇಸ್-2 ಈ ಯೋಜನೆಯಡಿ ಹೊರಗುತ್ತಿಗೆ ಆಧಾರದಲ್ಲಿ ಶಿಕ್ಷಕರನ್ನು ನೇಮಕ ಮಾಡಿಕೊಂಡು ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣವನ್ನು ಒದಗಿಸುವಲ್ಲಿ ವಿಶೇಷ ಪ್ರಯತ್ನ ಮಾಡಿದೆ.

ಈ ಯೋಜನೆಗಳು ಮುಗಿದ ನಂತರ ಇಲಾಖೆಯ ಸರ್ಕಾರಿ ಪ್ರೌಢ ಶಾಲೆಗಳ ವಿದ್ಯಾರ್ಥಿಗಳ ಗಣಕ ಶಿಕ್ಷಣಕ್ಕಾಗಿ ತಂತ್ರಜ್ಞಾನ ಆಧಾರಿತ ಕಲಿಕಾ ಕಾರ್ಯಕ್ರಮ/ Technology Assisted Learning Program (TALP) ಎಂಬ ವಿಶೇಷ ಕಾರ್ಯಕ್ರಮವನ್ನು ರೂಪಿಸಿ 2016-17 ನೇ ಸಾಲಿನಿಂದ ಅನುಷ್ಠಾನಗೊಳಿಸಿದೆ.

TALP ಅಡಿಯಲ್ಲಿ ಪ್ರೌಢಶಾಲೆಗಳ ಎಲ್ಲಾ ವಿಷಯ ಶಿಕ್ಷಕರಿಗೆ ಗಣಕ ಶಿಕ್ಷಣ ಹಾಗೂ ಗಣಕ ತಂತ್ರಜ್ಞಾನ ವನ್ನು ಬಳಸಿ ತರಗತಿ ಬೋಧನೆ ಕಲಿಕೆಯನ್ನು ಪೂರ್ಣಗೊಳಿಸುವ ಬಗ್ಗೆ ಅಗತ್ಯ ತರಬೇತಿಗಳಾದ ಇಂಡಕ್ಷನ್ ಟ್ರೈನಿಂಗ್ ಮತ್ತು ರಿಫ್ರೇಶರ್ ಟ್ರೈನಿಂಗ್ ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣವನ್ನು ನೀಡಲಾಗುತ್ತಿದ್ದು,ಅದರ ಮೂಲಕ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ ಒದಗಿಸಲು ಕ್ರಮವಹಿಸಿದೆ.

ಇದರಿಂದ ಸರ್ಕಾರಿ ಪ್ರೌಢ ಶಾಲಾ ವಿದ್ಯಾರ್ಥಿಗಳು ಗಣಕ ಶಿಕ್ಷಣದಿಂದ ವಂಚಿತವಾಗಿಲ್ಲವೆಂದು ತಿಳಿಸಲು ಹರ್ಷಿಸುತ್ತೇವೆ. ಸರ್ಕಾರಿ ಪ್ರೌಢಶಾಲೆಗಳಲ್ಲಿ ಗಣಕ ಶಿಕ್ಷಣ ಪ್ರಯೋಗಾಲಯಗಳನ್ನು ಸ್ಥಾಪಿಸುವ ಮೂಲಕ ಹಾಗೂ ಲ್ಯಾಪ್‌ಟಾಪ್ ಮತ್ತು ಪ್ರೊಜೆಕ್ಟರ್ ಗಳನ್ನು ಒದಗಿಸುವ ಮೂಲಕ ಪ್ರೌಢಶಾಲೆಗಳ ತರಗತಿ ಕೋಣೆಗಳನ್ನು ಡಿಜಿಟಲ್ ತರಗತಿ ಕೋಣೆಗಳಾಗಿ ಪರಿವರ್ತಿಸಿ ಬೋಧನಾ ಪ್ರಕ್ರಿಯಲ್ಲಿ ತಂತ್ರಜ್ಞಾನವನ್ನು ಸಮನ್ವಯಗೊಳಿಸಲಾಗಿದೆ.

2016-17 ರಿಂದ ಇಂದಿನವರೆಗೆ ಒಟ್ಟು 3069 ಸರ್ಕಾರಿ ಪ್ರೌಢಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್ ಸ್ಥಾಪಿಸುವ ಮೂಲಕ ಹಾಗೂ ಈ ಮುಂದಿನ ಕ್ರಮಗಳ ಮೂಲಕ ಪ್ರೌಢಶಾಲಾ ವಿದ್ಯಾರ್ಥಿಗಳ ಗಣಕ ಸಾಕ್ಷರತೆಯನ್ನುಉತ್ತೇಜಿಸಲು ವಿಶೇಷ ಕ್ರಮಗಳನ್ನು ವಹಿಸಿದೆ.

1. ಶಿಕ್ಷಕರು ಮತ್ತು ವಿದ್ಯಾರ್ಥಿಗಳು Digital Skill ಬಳಕೆಗಾಗಿ ಹಾಗೂ ಕಂಪ್ಯೂಟರ್ ಆಧಾರಿತ ಶಿಕ್ಷಣದ ಅಭಿವೃದ್ಧಿಗಾಗಿ ನೀಡಲಾಗಿರುವ ಪರಿಕರಗಳನ್ನು ಬಳಸಿ, ತಂತ್ರಜ್ಞಾನ ಆಧಾರಿತ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಹೆಚ್ಚಿಸುವ ಮೂಲಕ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ.
2. ಇ-ಸಂಪನ್ಮೂಲಗಳನ್ನು ಬಳಸಿ ತರಗತಿಗಳ ಬೋಧನಾ ಕಲಿಕಾ ಪ್ರಕ್ರಿಯೆ ಉತ್ತಮಪಡಿಸಲು ಒಟ್ಟು 48276 ಶಿಕ್ಷಕರಿಗೆ ತರಬೇತಿಗಳನ್ನು ನೀಡಲಾಗಿದೆ. ಪ್ರಸ್ತುತ ವರ್ಷ 20600 ಶಿಕ್ಷಕರಿಗೆ ಐ.ಸಿ.ಟಿ ತರಬೇತಿ ನೀಡಲು ಯೋಜಿಸಲಾಗಿದೆ.
3. The National Platform for Digital Infrastructure for Knowledge Sharing (DIKSHA)ದಲ್ಲಿ ತಂತ್ರಜ್ಞಾನ ನೆರವಿನ ಕಲಿಕಾ ತರಬೇತಿಗಳಮೂಲಕ ಡಿಜಿಟಲ್ ಸಂಪನ್ಮೂಲಗಳ ರಚನೆ ಮತ್ತು ಬಳಕೆಯಲ್ಲಿ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತಿದೆ ಮತ್ತು ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರ ಬಳಕೆಗಾಗಿ ಡಿಜಿಟಲ್ ಸಂಪನ್ಮೂಲಗಳನ್ನು ರಚಿಸಲಾಗುತ್ತಿದೆ.
4. 2025-26 ಸಾಲಿನ ಆಯವ್ಯಯದಲ್ಲಿ ಘೋಷಣೆಯಾಗಿರುವಂತೆ 6-10ನೇ ತರಗತಿಯ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯನ್ನು ಉತ್ತಮ ಪಡಿಸಲು ಹಾಗೂ ಡಿಜಿಟಲ್ ಸಂಪನ್ಮೂಲಗಳ ಬಳಕೆ ಯನ್ನು ಹೆಚ್ಚಿಸಲು ಶಾಲಾ ಶಿಕ್ಷಣ ಇಲಾಖೆಯು ಖಾನ್ ಅಕಾಡೆಮಿ ಸಹಯೋಗದೊಂದಿಗೆ 'ಜ್ಞಾನ ಸೇತು' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಖಾನ್ ಅಕಾಡೆಮಿಯವರು ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ವಿಷಯಗಳಲ್ಲಿಅಭಿವೃದ್ಧಿಪಡಿಸಿರುವ ಡಿಜಿಟಲ್ ಸಂಪನ್ಮೂಲಗಳನ್ನು ರಾಜ್ಯದ ಎಲ್ಲಾ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಸರ್ಕಾರಿ ಪ್ರೌಢ ಶಾಲೆ ಗಳ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಚಿತವಾಗಿ ಬಳಸಿಕೊಳ್ಳಬಹುದಾಗಿದೆ. ಖಾನ್ ಅಕಾಡೆಮಿಯ 'ಖಾನ್ಮಿಗೋ' ಕೃತಕ ಬುದ್ಧಿಮತ್ತೆಯನ್ನು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಉಚಿತ ಬಳಕೆಗೆ ನೀಡಲಾಗಿದೆ.
5. ಇ-ಸಂಪನ್ಮೂಲ;- 2017-18 ನೇ ಸಾಲಿನಿಂದ ರಾಜ್ಯದಲ್ಲಿ ಇ-ಸಂಪನ್ಮೂಲ ಅಭಿವೃದ್ಧಿ ಪ್ರಾರಂಭಿಸಲಾಗಿದೆ. 28000ಕ್ಕೂ ಹೆಚ್ಚು ಇ-ಸಂಪನ್ಮೂಲಗಳನ್ನು DIKSHA ಪೋರ್ಟಲ್‌ನಲ್ಲಿ ಲಭ್ಯಗೊಳಿಸಲಾಗಿದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಇ-ಸಂಪನ್ಮೂಲಗಳು ಸುಲಭವಾಗಿ ಲಭ್ಯವಾಗುವಂತೆ ಮಾಡುವುದು ಇದರ ಉದ್ದೇಶವಾಗಿದೆ. DIKSHA ಪೋರ್ಟಲ್‌ನಲ್ಲಿ ತರಗತಿವಾರು, ವಿಷಯಾವಾರು ಇ-ಪಠ್ಯಪುಸ್ತಕ, ಇ-ಸಂಪನ್ಮೂಲಗಳನ್ನು ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರು ಬಳಸಬಹುದಾಗಿದೆ. ದೈಹಿಕ ಶಿಕ್ಷಣ, ಸಂಗೀತ, ಚಿತ್ರಕಲೆ, ನಾಟಕ ಮತ್ತು ಕ್ರಾಫ್ಟ್ ವಿಷಯಗಳಿಗೂ ಇ-ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲಾಗಿದೆ.
6. ಇಲಾಖೆಯು ವಿಡಿಯೋ ಪಾಠಗಳು, ಸಂವಾದಾತ್ಮಕ ಚಟುವಟಿಕೆಗಳು, ಪ್ರಶ್ನಾವಳಿಗಳು.. ಇತರೆ ರೂಪದಲ್ಲಿ ಇ-ಸಂಪನ್ಮೂಲಗಳನ್ನು ಶಿಕ್ಷಕರ ಸಹಕಾರದೊಂದಿಗೆ ಸೃಜಿಸಿದೆ.ವಿಡಿಯೋ ಪಾಠಗಳನ್ನು ಕನ್ನಡ, ಆಂಗ್ಲ, ಉರ್ದು ಮತ್ತು ಮರಾಠಿ ಮಾಧ್ಯಮಗಳಲ್ಲಿ ಸೃಜಿಸಲಾಗಿದೆ. ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗೆ ಅನುಕೂಲಿಸಲು ಆಡಿಯೋ ಪಾಠಗಳನ್ನ ಸೃಜಿಸಿ DIKSHA ಪೋರ್ಟಲ್‌ನಲ್ಲಿ ಲಭ್ಯಗೊಳಿಸಲಾಗಿದೆ. ಸ್ವಯಂಸೇವಾ ಸಂಸ್ಥೆಗಳಾದ India Literacy Project(ILP), Akshara Foundation, Khan Academy, SSSVV ಇವರು ವಿದ್ಯಾದಾನ್ ಯೋಜನೆಯಡಿ ಇ-ಸಂಪನ್ಮೂಲಗಳನ್ನು ಸೃಜಿಸಿ ಕೊಡುಗೆಯಾಗಿ ನೀಡಿರುತ್ತಾರೆ.
7. ಸರ್ಕಾರೇತರ ಸಂಸ್ಥೆಗಳ ಸಹಕಾರದೊಂದಿಗೆ AI ಆಧಾರಿತ, ತಂತ್ರಜ್ಞಾನ ಬೆಂಬಲಿತ ಕಾರ್ಯಕ್ರಮಗಳನ್ನು ಅನುಷ್ಠಾನಿಸಲು ಕ್ರಮ ವಹಿಸಲಾಗುತ್ತಿದೆ.

8. **Energized ಪಠ್ಯಪುಸ್ತಕಗಳು;-** ಎಲ್ಲಾ 576 ಶೀರ್ಷಿಕೆಗಳ ಪಠ್ಯಪುಸ್ತಕಗಳನ್ನು Energize ಮಾಡಲಾಗಿದೆ.1 ರಿಂದ 10ನೇ ತರಗತಿಯ ಎಲ್ಲಾ ವಿಷಯಗಳ ಇ-ಸಂಪನ್ಮೂಲಗಳ ಅಭಿವೃದ್ಧಿ-ಮ್ಯಾಪಿಂಗ್, ಕ್ಯುರೇಶನ್, ಸ್ಥಳೀಕರಣ ಮತ್ತು ಎಲ್ಲಾ ಇ_ಸಂಪನ್ಮೂಲಗಳನ್ನು ನಿಗದಿತ ನಮೂನೆಯಲ್ಲಿ DIKSHA ಪೋರ್ಟಲ್‌ನಲ್ಲಿ ಅಳವಡಿಸಲಾಗಿದೆ. ಈ ಎಲ್ಲಾ ಇ-ಸಂಪನ್ಮೂಲಗಳನ್ನು QR ಕೋಡ್‌ಗಳಿಗೆ ಲಿಂಕ್ ಮಾಡಲಾಗಿದೆ. ಎಲ್ಲಾ ಪಠ್ಯಪುಸ್ತಕಗಳಿಗೆ ಮತ್ತು ಎಲ್ಲಾ ಅಧ್ಯಾಯಗಳಿಗೆ QR ಕೋಡ್‌ಅನ್ನು ಪ್ರಿಂಟ್ ಮಾಡಲಾಗಿದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಈ QR ಕೋಡ್‌ಅನ್ನು ಸ್ಕ್ಯಾನ್ ಮಾಡುವ ಮೂಲಕ ಸಂಬಂಧಿಸಿದ ಇ-ಸಂಪನ್ಮೂಲಗಳನ್ನು ನೋಡಬಹುದಾಗಿರುತ್ತದೆ. ಕರ್ನಾಟಕ ರಾಜ್ಯವು ದೇಶದಲ್ಲಿಯೇ ದೀಕ್ಷಾ ಪೋರ್ಟಲ್‌ನಲ್ಲಿ ಇ-ಸಂಪನ್ಮೂಲ ಬಳಕೆಯಲ್ಲಿ ಎರಡನೇ ಸ್ಥಾನವನ್ನು ಪಡೆದಿರುತ್ತದೆ.
9. ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿ ಗಳಿಗೆ TALP ಕಾರ್ಯಕ್ರಮ ಮೂಲಕ ವೈಜ್ಞಾನಿಕವಾಗಿ ಗಣಕ ಸಾಕ್ಷರತೆ ಮತ್ತು ತಂತ್ರಜ್ಞಾನ ಆಧಾರಿತ ಕಲಿಕಾ ಅನುಭವಗಳನ್ನು ಒದಗಿಸಲಾಗುತ್ತಿದೆ.

**EP 71 EGOV 2025**

(ಎಸ್. ಮಧು ಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**